ರಾಜ್ಯದಲ್ಲಿ ಸಾಮೂಹಿಕ ವರ್ಗಾವಣೆ.

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ: 971(1360)

ಸದಸ್ಯರ ಹೆಸರು: ಶ್ರೀ ಲಕ್ಷ್ಮೀನಾರಾಯಣ.ಎಂ.ಡಿ(ತುರುವೇಕೆರೆ)

ಪ್ರಶ್ನೆ

ಅ) ಕಳೆದ ವರ್ಷ ಸಾಮೂಹಿಕ ವರ್ಗಾವಣೆ ಇಲ್ಲದಿದ್ದರೂ, ಮುಖ್ಯಮಂತ್ರಿಗಳ ಶಿಫಾರಸ್ಸು ಮೇರಿಗೆ ಎಷ್ಟು ವರ್ಗಾವಣೆಗಳನ್ನು ಮಾಡಲಾಯಿತು?

ಆ) ಯಾವ ಮಾನದಂಡದ ಮೇಲೆ ವರ್ಗಾವಣೆ ಮಾಡಲಾಗಿದೆ?

ಇ) ಈ ವರ್ಷ ಸಾಮೂಹಿಕ ವರ್ಗಾವಣೆ ಮಾಡಲಾಗುವುದೇ?

ಉತ್ತರಿಸುವ ಸಚಿವರು: ಶ್ರೀ ಎಸ್.ಎಂ.ಕೃಷ್ಣ(ಮುಖ್ಯಮಂತ್ರಿಯವರು)

ಉತ್ತರ

ಅ) ಕಳೆದ ಸಾಲು ಅಂದರೆ 2000-01ನೇ ಸಾಲಿನಲ್ಲಿ ಸರ್ಕಾರಿ ನೌಕರರ ಸಾರ್ವತ್ರಿಕ ವರ್ಗಾವಣೆ ಇತ್ತು.

ಆ) ದಿನಾಂಕ 28-4-95ರ ಅಧಿಕೃತ ಜ್ಞಾಪನ ಸಂಖ್ಯೆ: ಸಿಆಸುಇ 5ಸೇನಾಪ 95ರ ಪ್ರಕಾರ.

ಇ) ಇಲ್ಲ.

ತುರುವೇಕೆರೆ ನಗರದಲ್ಲಿ ಮಹಿಳಾ ಪೋಲೀಸ್ ಸಿಬ್ಬಂದಿಯ ನೇಮಕ.

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ: 972(1375)

ಸದಸ್ಯರ ಹೆಸರು: ಶ್ರೀ ಲಕ್ಷ್ಮೀನಾರಾಯಣ.ಎಂ.ಡಿ(ತುರುವೇಕೆರೆ)

ಪ್ರಶ್ನೆ

ಅ) ತುರುವೇಕೆರೆ ನಗರದಲ್ಲಿ ಪೋಲೀಸ್ ಸ್ಟೇಷನ್ ಇರುವ ಇತ್ತೀಚಿನ ದಿನಗಳಲ್ಲಿ ಹೆಚ್ಚಾಗಿ ಮಹಿಳಾ ದೂರುಗಳು ಬರುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೆ?